ಡಾ: ಜಿ.ಪರಮೇಶ್ವರ:- ಸನ್ಮಾನ್ಯ ಅಧ್ಯಕ್ಷರೇ, ಅವರು ಹೇಳುತ್ತಾ ಇರತಕ್ಕದ್ದು ಏನೆಂದರೆ: ಕುಣಿಗಲ್ ಮತ್ತು ಮಾಗಡಿಯಲ್ಲಿ ಏನು ಬಿತ್ತನೆ ವಲಯವಿದೆ, ಅಲ್ಲಿಗೆ ಒಬ್ಬ ಸಹಾಯಕಕಾರ್ಯಪಾಲಕ ಅಭಿಯಂತರನ್ನು 1993-94ಕ್ಕೆ ಸುಮಾರು 5 ಕೋಟಿ ಕಾಮಗಾರಿಗಳನ್ನು ನೋಡಿಕೊಳ್ಳಬೇಕೆಂದು, 14-7-92 ರಿಂದ ಖಾಲಿ ಬಿದ್ದಿದ್ದಂಥ ಸಹಾಯಕ ಕಾರ್ಯಪಾಲಕ ಅಭಿಯಂತರ ಹುದ್ದೆಗೆ ನಮ್ಮ ಇಲಾಖೆಯಲ್ಲಿಯೇ ಇದ್ದವರನ್ನು ಅಲ್ಲಿಗೆ ವರ್ಗಾವಣೆ ಮಾಡಿಕೊಂಡಿದ್ದೇವೆ. ಕಾರಣವೇನೆಂದರೆ ಈ 5 ಕೋಟಿ ರೂಪಾಯಿಗಳ ಕಾಮಗಾರಿಯನ್ನು ಶ್ರದ್ಧೆಯಿಂದ ಮಾಡಬೇಕು, ಈ ಕುಣಿಗಲ್ ಬಿತ್ತನೆ ವಲಯ ಏನು ಇದೆ ಅದು ಸಮರ್ಪಕವಾಗಿ ಆಗಬೇಕೆಂದು ವರ್ಗಾವಣೆ ಮಾಡಿಕೊಂಡಿದ್ದೇವೆ. ಸನ್ಮಾನ್ಯ ಸದಸ್ಯರು ಹೇಳಿದಂತೆ ನಾವು ಏನು ಪಿ.ಡಬ್ಲ್ಯೂ.ಡಿ. ಇಲಾಖೆಯಿಂದ 21-1-93ರಲ್ಲಿ ಅವರನ್ನು ತೆಗೆದುಕೊಂಡಿದ್ದೆವೋ ಅವರನ್ನು ವಾಪಸ್ ಕೊಡಬೇಕೆಂದು ಕೇಳಿರುವದು ನಿಜ. ಆದರೆ ನಮಗೆ ಈ 5 ಕೋಟಿ ರೂಪಾಯಿಯಷ್ಟು ಕೆಲಸ ಇನ್ನೂ ಬಾಕಿ ಇರುವುದರಿಂದ, ಅವರ ಕೆಲಸ ಇನ್ನೂ ಆಗತ್ಯವಿದೆ ಎಂದು ನಾವು ಲೋಕೋಪಯೋಗಿ ಇಲಾಖೆಗೆ ಬರೆದುಕೊಂಡಿದ್ದೇವೆ. ಆ ಕಾರಣಕ್ಕಾಗಿ ಅವರು ಯಾವ ತಪ್ಪನ್ನೂ ಮಾಡಿಲ್ಲ, ಮತ್ತು ನಾನು ತಪ್ಪು ಮಾಹಿತಿಯನ್ನು ಕೊಟ್ಟಿದ್ದೇನೆಂದು ಅವರು ಹೇಳುತ್ತಿರುವುದು ಸರಿಯಲ್ಲ. ಒಂದು ವೇಳೆ ಮಾನ್ಯ ಸದಸ್ಯರು ಹೇಳುವುದರಲ್ಲಿ ಯಾವುದಾದರೊಂದು ಕೆಲಸದಲ್ಲಿ ಕಳಪೆಯಾಗಿದ್ದರೆ, ಏನಾದರೂ ತಪ್ಪನ್ನು ಮಾಡಿದ್ದರೆ ಅದನ್ನು ನನ್ನ ಗಮನಕ್ಕೆ ತಂದರೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಕೆ.ಎಂ.ಪುಟ್ಟು:- ಅಧ್ಯಕ್ಷರೇ ಸಿ.ಟಿ.ಸಿ ಫಾರಂನಲ್ಲಿ ಅವನು ಕಾರ್ಯ ಮುಕನಾದ ಮೇಲೆ ಇವರ ಇಲಾಖೆಯಲ್ಲಿ ಎಷ್ಟು ಕೋಟಿ ರೂಪಾಯಿಗಳ ಕೆಲಸವಿದ್ದರೂ ಕೂಡ ಹೇಗೆ ಕೆಲಸ ಮಾಡಲು ಬರುತ್ತದೆ? ಅವನನ್ನು ಮರಳಿ ಮಾತ್ರ ಸಂಸ್ಥೆಗೆ ಕೊಟ್ಟ ಮೇಲೆ, ಅವನನ್ನು ಸಮರ್ಥನೆ ಮಾಡಿಕೊಂಡು ಹೇಗೆ ಇವರು ಮಾತನಾಡುತ್ತಾರೆ? ಸಿ.ಟಿ.ಸಿ ಎಂದರೆ ಏನು ಎನ್ನುವುದನ್ನು ಮಾನ್ಯ ಮಂತ್ರಿಗಳು ಹೇಳಿದರೆ ಸಾಕು, ಸರಿಯಾಗುತ್ತದೆ. 21-1-93ರಲ್ಲಿ ಅವನು ಇಲಾಖೆಯಿಂದ ವಾಪಸ್ ಹೋದಮೇಲೆ ಅವನನ್ನು ನಾವು ಇಟ್ಟುಕೊಂಡಿದ್ದೇವೆ, ಕೆಲಸದ ಕಾರ್ಯಭಾರವಿದೆ, ಅವನನ್ನು ಆ ಕಾರಣಕ್ಕಾಗಿ ಇಟ್ಟುಕೊಂಡಿದ್ದೇವೆ ಎಂದು ಹೇಳಿದರೆ ಹೇಗೆ? ಅವರನ್ನು ಪುನಃ ಆ ಇಲಾಖೆಗೆ ಬರೆದು ಮರಳಿ ಪಡೆಯಬಹುದಾಗಿತ್ತು; ಆದರೆ ಇವರು ಆ ಕೆಲಸಕ್ಕೆ ಹೋಗಲಿಲ್ಲ; ಅವನನ್ನು ಬಿಡುಗಡೆ ಮಾಡಲಿಲ್ಲ, ಅವನನ್ನು ಉದ್ದೇಶಪೂರ್ವಕವಾಗಿ ಇಟ್ಟುಕೊಂಡರು.

ಡಾ:ಜಿ.ಪರಮೇಶ್ವರ:- ಅವರು ಸಿ.ಟಿ.ಸಿ ಗೆ ಸಹಿ ಹಾಕಿದ್ದರೂ ಕೂಡ, ನಾನು ಮೊದಲೇ ಹೇಳಿದಹಾಗೆ ಅವರ ಸೇವೆಯನ್ನು ಮತ್ತೆ ನಮಗೆ ಮುಂದುವರೆಸಿಕೊಡಬೇಕೆಂದು ನಾವು ಲೋಕೋಪಯೋಗಿ ಇಲಾಖೆಗೆ ಬರೆದುಕೊಂಡಿದ್ದೇವೆ. ಆ ಕಾರಣಕ್ಕಾಗಿ ಅವರು ಮುಂದುವರೆಯುತ್ತಿದ್ದಾರೆಯೇ ವಿನಹ ಮತ್ತೆ ಯಾವ ಅವ್ಯವಹಾರವೂ ಸಹ ನಡೆದಿಲ್ಲ. ಒಂದುವೇಳೆ ಆ ರೀತಿ ಅನ್ಯಾಯವಾಗಿದೆ ಎಂಬುದು ತಮ್ಮ ಗಮನಕ್ಕೆ ಬಂದಿದ್ದರೆ ಅದನ್ನು ನನ್ನ ಗಮನಕ್ಕೆ ತನ್ನಿ;ನಾನು ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ವಿಷಯ:- ಬೆಳಗಾವಿ ಜಿಲ್ಲೆಯಲ್ಲಿ ಕಬ್ಬು ಅರೆಯುವಿಕೆ ಕುರಿತು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 71(379)

ಶ್ರೀ ಶಿವಾನಂದ ಎಚ್.ಕೌಜಲಗಿ(ಬೈಲಹೊಂಗಲ)

ಮಾನ್ಯ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) 1991-92 ಹಾಗೂ 1992-93ನೇ ಸಾಲಿನಲ್ಲಿ ಬೆಳಗಾವಿ ಜಿಲ್ಲೆಯಲ್ಲಿ ಯಾವ ಯಾವ ಸಕ್ಕರೆ ಕಾರ್ಖಾನೆಗಳು ಎಷ್ಟು ಎಷ್ಟು ಕಬ್ಬನ್ನು ಅರೆದಿರುವರು?(ಕಾರ್ಖಾನೆವಾರು ವಿವರ ಕೊಡುವುದು)

ಆ) 1991-92 ಹಾಗೂ 1992-93ನೇ ಸಾಲಿನಲ್ಲಿ ಬೆಳಗಾವಿ ಜಿಲ್ಲೆಯಲ್ಲಿನ ಕಬ್ಬು ಬೇರೆ ಪ್ರಾಂತ್ಯಗಳಿಗೆ ಹೋಗಿರುವುದು ಎಷ್ಟು?(ಪ್ರಾಂತ್ಯಗಳ ವಿವರ ಕೊಡುವುದಾಗಬೇಕು)

ಇ) ಕಳೆದ 2 ವರ್ಷಗಳಲ್ಲಿ ಜಿಲ್ಲೆಯಲ್ಲಿರುವ ಯಾವ ಯಾವ ಕಾರ್ಖಾನೆಗಳು ಎಷ್ಟು ಎಷ್ಟು ದಿನ ಕಬ್ಬನ್ನು ಅರೆದಿರುವರು(ಕಾರ್ಖಾನೆವಾರು ವಿವರ ಕೊಡುವುದು)

ಈ)1992-93ನೇ ಸಾಲಿನಲ್ಲಿ ಕಬ್ಬು ಹೊರ ರಾಜ್ಯಕ್ಕೆ ಹೋದದ್ದರಿಂದ ಬೆಳಗಾವಿ ಜಿಲ್ಲೆಯಲ್ಲಿರುವ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಇಲ್ಲದೆ ಇರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) ಹೊರ ರಾಜ್ಯಕ್ಕೆ ಕಬ್ಬು ಹೋದದ್ದರಿಂದ ರಾಜ್ಯ ಸರ್ಕಾರಕ್ಕೆ ಎಷ್ಟು ಹಣ ನಷ್ಟ ಉಂಟಾಗಿರುವುದು?

ಡಾ || ಹೆಚ್.ಡಿ.ಲಮಾಣಿ

(ಸಕ್ಕರೆ ಸಚಿವರು)

ವಿವರವನ್ನು ಅನುಬಂಧ 1ರಲ್ಲಿ ತೋರಿಸಿದೆ.

ವಿವರಗಳು ಈ ಕೆಳಕಂಡಂತೆ ಇರುತ್ತದೆ:

1) 1991-92	ಮಹಾರಾಷ್ಟ್ರಕ್ಕೆ -	90,950 ವೆ ಎ.ಟನ್
	ಗೋವಾ ರಾಜ್ಯಕ್ಕೆ	25,000 ಮೆ.ಟನ್
2) 1992-93	ಮಹಾರಾಷ್ಟ್ರಕ್ಕೆ -	74,524 ಮೆ.ಟನ್
	ಗೋವಾ ರಾಜ್ಯಕ್ಕೆ	30,000 ಮೆ.ಟನ್

ವಿವರವನ್ನು ಅನುಬಂಧ 2ರಲ್ಲಿ ತೋರಿಸಿದೆ.

1992-93ನೇ ಸಾಲಿನಲ್ಲಿ ಬೆಳಗಾವಿ ಜಿಲ್ಲೆಯ ಸಕ್ಕರೆ ಕಾರ್ಖಾನೆಗಳ ಬೇಡಿಕೆಗಿಂತ ಅಧಿಕವಾಗಿ ಜಿಲ್ಲೆಯಲ್ಲಿ ಕಬ್ಬು ಉತ್ಪಾದನೆಯಾಗಿತ್ತು. ಮಹಾರಾಷ್ಟ್ರ ರಾಜ್ಯದಲ್ಲಿ ಸದರಿ ಸಾಲಿನಲ್ಲಿ ಕಬ್ಬಿನ ಉತ್ಪನ್ನ ಕಡಿಮೆಯಾಗಿದ್ದರಿಂದ ಅಲ್ಲಿಯ ಸಕ್ಕರೆ ಕಾರ್ಖಾನೆಗಳು ಬೆಳಗಾವಿ ಜಿಲ್ಲೆಯಿಂದ ಹೆಚ್ಚುವರಿ ಕಬ್ಬನ್ನು ಪಡೆಯಲು ಪ್ರಸ್ತಾಪಿಸಿದ್ದರಿಂದ, ಈ ಬಗ್ಗೆ ಬೆಳಗಾವಿ ಜಿಲ್ಲಾಧಿಕಾರಿಗಳವರು ಜಿಲ್ಲೆಯ ಎಲ್ಲಾ ಸಕ್ಕರೆ ಕಾರ್ಖಾನೆಗಳ ಮಾಲೀಕ ವೃಂದವನ್ನು ಕರೆದು ಒಂದು ಸಭೆ ನಡೆಸಿ ಸದರಿ ಸಭೆಯಲ್ಲಿ ನಿರ್ಣಯವಾದಂತೆ ಮಹಾರಾಷ್ಟ್ರ ಹಾಗೂ ಗೋವಾ ರಾಜ್ಯಕ್ಕೆ 104,524 ಮೆ.ಟನ್ ಹೆಚ್ಚುವರಿ ಕಬ್ಬನ್ನು ರವಾನಿಸುವ ಬಗ್ಗೆ ಪರ್ಮಿಟ್ ನೀಡಿರುತ್ತಾರೆ. ಕಬ್ಬು ನುರಿಸುವ ಹಂಗಾಮು ಮುಗಿಯುವ ಹಂತದಲ್ಲಿ ಕಾರ್ಖಾನೆಗಳಿಗೆ ಕಬ್ಬಿನ ಕೊರತೆ ಉಂಟಾದುದಾಗಿ ವರದಿಯಾಗಿರುತ್ತದೆ. ಆದರೆ ಜಿಲ್ಲೆಯ ಸಕ್ಕರೆ ಕಾರ್ಖಾನೆಗಳು ಕಬ್ಬು ಇಲ್ಲದೇ ಇರುವ ಪರಿಸ್ಥಿತಿ ಎದುರಿಸಿರುವುದಿಲ್ಲ.

ಬೆಳಗಾವಿ ಜಿಲ್ಲಾಧಿಕಾರಿಗಳಿಂದ ಮಾಹಿತಿಯನ್ನು ಕೋರಲಾಗಿದ್ದು ಅದು ಬಂದ ನಂತರ ಜರೂರಾಗಿ ಸದನಕ್ಕೆ ಒದಗಿಸಲಾಗುವುದು.

(ಅನುಬಂಧ-1)

ಬೆಳಗಾವಿ ಜಿಲ್ಲೆಗಳ ಸಕ್ಕರೆ ಕಾರ್ಖಾನೆಗಳ 2 ವರ್ಷಗಳ ಕಾರ್ಯಪ್ರಗತಿ

(ಮೇ -ಟನ್)

ಕ್ರಮ ಸಂಖ್ಯೆ	ಸಕ್ಕರೆ ಕಾರ್ಖಾನೆಗಳ ಹೆಸರು	ನುರಿಸಿದ ಕಬ್ಬು	91-92 ಉತ್ಪಾದಿಸಿದ ಸಕ್ಕರೆ	ಶೇ. ಇಳುವರಿ	ನ ುರಿಸಿದ ಕಬ್ಬು	92-93 ಉತ್ಪಾದಿಸಿದ ಸಕ್ಕರೆ	ಶೇ. ಇಳುವರಿ
01	ದೊಧಗಂಗಾ ಕೃಷ್ಣಾ	4,05,786	46,892	11.56	3,57,333	42,653	11.94
02	ಘಟಪ್ರಭಾ	2,88,826	32,407	11.22	2,24,182	25,612	11.42
03	ಹಾಲಸಿದ್ದನಾಥ	2,42,425	27,957	11.53	2,25,011	24,944	11.09
04	ಹಿರಣ್ಯ ಕೇಶಿ	7,48,594	85,853	11.47	7,53,350	83,110	10.98
05	ಮಲಪ್ರಭಾ	7,15,502	80,578	11.26	5,94,364	68,814	11.55
06	ರಾಯಭಾಗ್	2,63,064	32,095	12.20	2,19,112	24,813	11.32
07	ಉಗಾರ್ ಶುಗರ್	10,15,853	1,25,576	12.36	7,18,902	91,604	12.74
	ಒಟ್ಟು	36,80,050	4,31,358	11.72	30,92,254	3,61,550	11.69

ಅನುಬಂಧ -2

ಬೆಳಗಾವಿ ಜಿಲ್ಲೆಯ ಸಕ್ಕರೆ ಕಾರ್ಖಾನೆಗಳು ಕಳೆದ 2 ವರ್ಷಗಳಲ್ಲಿ ಪ್ರತಿವರ್ಷ ಕಬ್ಬು ಅರೆದ ಒಟ್ಟು ದಿವಸಗಳು

ಕ್ರಮ ಸಂಖ್ಯೆ	ಸಕ್ಕರೆ ಕಾರ್ಖಾನೆಗಳ ಹೆಸರು	91-92ರಲ್ಲಿ ಕೆಲಸ ಮಾಡಿದ ದಿವಸಗಳು	92-93ರಲ್ಲಿ ಕೆಲಸ ಮಾಡಿದ ದಿವಸಗಳು
01	ದೊಧಗಂಗಾ ಕೃಷ್ಣಾ	190	160
02	ಘಟಪ್ರಭಾ	222	159
03	ಹಾಲಸಿದ್ದನಾಥ	190	151
04	ಹಿರಣ್ಯಕೇಶಿ	162	156
05	ಮಲಪ್ರಭಾ	212	186
06	ರಾಯಬಾಗ್	191	160
07	ಉಗಾರ್ ಶುಗರ್	232	150

ಶ್ರೀ ಶಿವಾನಂದ ಹೆಚ್.ಕೌಜಲಗಿ:- ಸನ್ಮಾನ್ಯ ಅಧ್ಯಕ್ಷರೇ, ನಾನು ಕೇಳಿದಂಥ ಪ್ರಶ್ನೆಗಳು ಮೂರು. ಆದರಲ್ಲಿ ನಮ್ಮ ಬೆಳಗಾಂ ಜಿಲ್ಲೆಯಿಂದ ಈ ವರ್ಷ ಹೊರರಾಜ್ಯಕ್ಕೆ ಎಷ್ಟು ಕಬ್ಬನ್ನು ಕಳುಹಿಸಲಾಗಿತ್ತು? ಆ ಕಬ್ಬನ್ನು ಕಳುಹಿಸಿದ್ದರಿಂದ ನಮ್ಮ ರಾಜ್ಯಕ್ಕೆ ಎಷ್ಟು ಹಾನಿಯಾಗಿದೆ? ಮೂರನೆಯದಾಗಿ ಇದರಿಂದ ಫ್ಯಾಕ್ಟರಿಗಳ ಮೇಲೆ ಯಾವ ಪ್ರಕಾರವಾಗಿ ಪರಿಣಾಮವಾಗಿದೆ ಎಂದು ಪ್ರಶ್ನೆ ಕೇಳಿದ್ದೆ. ತಾವು ಆದರ ಬಗ್ಗೆ ಉತ್ತರ ಕೊಟ್ಟಿದ್ದೀರಿ. ನಾನು ಈ ಬಗ್ಗೆ ಕೇಳಿಕೊಳ್ಳುವುದೇನೆಂದರೆ, ಹೊರರಾಜ್ಯಕ್ಕೆ ಕಬ್ಬು ಹೋಗಿರುವುದರಿಂದ ರಾಜ್ಯ ಸರ್ಕಾರಕ್ಕೆ ಎಷ್ಟು ಹಣ ನಷ್ಟವಾಗಿದೆ ಎನ್ನುವುದಕ್ಕೆ "ಬೆಳಗಾಂ ಜಿಲ್ಲಾಧಿಕಾರಿಗಳಿಂದ ಮಾಹಿತಿಯನ್ನು ಕೋರಲಾಗಿದ್ದು ಅದು ಬಂದನಂತರ ಜರೂರಾಗಿ ಸದನಕ್ಕೆ ಒದಗಿಸಲಾಗುವುದು" ಎಂದು ಉತ್ತರವನ್ನು ಕೊಟ್ಟಿದ್ದಾರೆ. ಹಾಗಾದರೆ ನಾವು ಅವರನ್ನು ಯಾವ ಪ್ರಕಾರವಾಗಿ ಪ್ರಶ್ನೆಯನ್ನು ಕೇಳಬೇಕೆಂಬುದನ್ನು ಅವರೇ ಹೇಳಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಜಿಲ್ಲಾಧಿಕಾರಿಗಳಿಂದ ಮಾಹಿತಿ ಬಂದ ನಂತರ ನಾವು ಸದನಕ್ಕೆ ಮಾಹಿತಿ ಕೊಡುತ್ತೇವೆಂದು ಹೇಳುವುದಾದರೆ, ಈ ಪ್ರಶ್ನೆಯನ್ನು ನಾವು 15 ದಿವಸದ ಹಿಂದೆ ಕೇಳಿರುತ್ತೇವೆ, ಈ ಸರ್ಕಾರಕ್ಕೆ ಈ ರೀತಿಯ ಉತ್ತರಕೊಡತಕ್ಕಂಥ ಪ್ರಸಂಗ ಬಂದರೆ ಇದು ಎಂಥ ಸರ್ಕಾರವೆಂದು ನಾವು ಕರೆಯಬೇಕು? ಇವರಿಗೆ ವಿವರಪಡೆಯಲು ಇಷ್ಟೊಂದು ಫೋನ್ ಸೌಕರ್ಯ ಇದೆ; ಏನು 7 ಲಕ್ಷ ಟನ್ ಹೊರರಾಜ್ಯಕ್ಕೆ ಹೋಗಿದೆ;ಆದರಿಂದ ನಮ್ಮ ರಾಜ್ಯಕ್ಕೆ ಎಷ್ಟು ನಷ್ಟವಾಗಿದೆ ಎಂದು ಹೇಳುವ ಸ್ಥಿತಿಯಲ್ಲಿ ಇಲ್ಲವೆಂದರೆ ಏನು? ಎರಡನೆಯದಾಗಿ, 1991-92ರ ಮೇ, ಸಾಲಿನಲ್ಲಿ 36 ಲಕ್ಷದ 80 ಸಾವಿರ ಟನ್ ಕಬ್ಬು ನಮ್ಮಲ್ಲಿ ನುರಿಸಿದ್ದರೆ 1992-93ರಲ್ಲಿ 30 ಲಕ್ಷ ಟನ್ ಕಬ್ಬನ್ನು ನುರಿಸಲಾಗಿದೆ. ಈ ರೀತಿ ಕಡಿಮೆ ಆಗಬೇಕಾದರೆ ಕಾರಣವೇನು? ಏಕೆಂದರೆ, ತಾವು ತಮ್ಮ ಉತ್ತರದಲ್ಲಿ ಸುಮಾರು ಒಂದು ಲಕ್ಷ ಟನ್ ಹೊರಗೆ ಹೋಗಿದೆ ಎಂದು ಹೇಳಿದ್ದೀರಿ, ಆದರೆ ಇವತ್ತಿನ ದಿವಸ 6ಲಕ್ಷ ಟನ್ ಕಬ್ಬನ್ನು ಅರೆಯುವಲ್ಲಿ ಕಡಿಮೆಯಾಗಿದೆ, ಆದರೂ ಕೂಡ ಹೊರರಾಜ್ಯಕ್ಕೆ ಕಬ್ಬನ್ನು ಕಳುಹಿಸಲು ಕಾರಣವೇನು? ಬೆಳಗಾಂನ್ನು ಬಿಟ್ಟು ಬೇರೆ ರಾಜ್ಯಕ್ಕೆ ಕಬ್ಬನ್ನು ಕಳುಹಿಸಲು ಕಾರಣವೇನು?

ಡಾ||ಹೆಚ್.ಡಿ.ಲಮಾಣಿ:- ಸನ್ಮಾನ್ಯ ಅಧ್ಯಕ್ಷರೇ, ಬೆಳಗಾಂ ಜಿಲ್ಲೆಯಲ್ಲಿ ಈ ಕಬ್ಬನ್ನು ಬೆಳೆಯುವ ಪ್ರದೇಶ ಬಹಳಷ್ಟು ಇದೆ. ಸುಮಾರು 40 ಲಕ್ಷ ಟನ್ ಕಬ್ಬನ್ನು ಬೆಳೆಯುವ ಪ್ರದೇಶವನ್ನು ಆ ಜಿಲ್ಲೆ ಹೊಂದಿದೆ. ಆದರೆ 1992-93ರಲ್ಲಿ ಗೋವಾ ಮತ್ತು ಮಹಾರಾಷ್ಟ್ರದಲ್ಲಿ ಮಳೆಯ ಅಭಾವದಿಂದ ಕಬ್ಬಿನ ಬೆಳೆಯು ಕಡಿಮೆಯಾಗಿದ್ದರಿಂದ ಆ ರಾಜ್ಯದವರು ನಮ್ಮಲ್ಲಿಂದ ಕಬ್ಬನ್ನು ಒದಗಿಸುವಂತೆ ಕೇಳಿಕೊಂಡರು ಆಗ ನಮ್ಮ ಬೆಳಗಾಂ ಜಿಲ್ಲಾಧಿಕಾರಿಗಳು, ಬೇರೆ ಬೇರೆ ಕಾರ್ಖಾನೆಗಳ ಎಂ.ಡಿ. ಗಳನ್ನು ಮತ್ತು ಬೇರೆ ಬೇರೆ ಸಮಿತಿಯವರನ್ನು ಕರೆಸಿ ಮಾತನಾಡಿ, ಈ ಸಲ ಎಷ್ಟು ಕಬ್ಬನ್ನು ಬೆಳೆಯಬಹುದು, ಎಷ್ಟು ಕಬ್ಬು ಆಗುತ್ತದೆ, ಎಷ್ಟು ಕಬ್ಬನ್ನು ಕಾರ್ಖಾನೆಯಲ್ಲಿ ಅರೆಯಬಹುದೆಂದು ವಿಚಾರ ಮಾಡಿದಾಗ ಈ ವರ್ಷದಲ್ಲಿ ನಮ್ಮಲ್ಲಿ ಕಬ್ಬು ಸ್ವಲ್ಪ ಜಾಸ್ತಿ ಬರುತ್ತದೆ ನಾವು ಹೊರರಾಜ್ಯಕ್ಕೆ ಕಬ್ಬನ್ನು ಕಳುಹಿಸುವುದರಿಂದ ಏನೂ ತೊಂದರೆಯಾಗುವುದಿಲ್ಲವೆಂದು ಅವರೆಲ್ಲರೂ ಕೂಡ ಯುನಾನಿಮಸ್ ಆಗಿ ಹೇಳಿದ್ದರಿಂದ ನಮ್ಮ ಜಿಲ್ಲಾಧಿಕಾರಿಗಳು 1992-93ರ ಸಾಲಿಗೆ ಸುಮಾರು 1 ಲಕ್ಷದ 4 ಸಾವಿರದ 524ಟನ್ ಕಬ್ಬನ್ನು ಹೊರರಾಜ್ಯಕ್ಕೆ ಹೋಗಲು ಅನುಮತಿಯನ್ನು ಕೊಟ್ಟಿದ್ದಾರೆ. ಇದು ಅಥೆಂಟಿಕ್ ಆಗಿ ನಮಗೆ ಸಿಕ್ಕಿರುವ ಅಂಕಿಅಂಶಗಳು. ನಾವೂ ಕೂಡ ಆ ಭಾಗದಲ್ಲಿ ಬಹಳಷ್ಟು ಪ್ರದೇಶದಲ್ಲಿ ಕಬ್ಬು ಬೆಳೆದಿದೆ, ನಮ್ಮ ಕಾರ್ಖಾನೆಗಳಿಗೆ ಬೇಕಾಗಿರುವ ಕಬ್ಬು ಇದೆ ಎಂದು ಭಾವಿಸಿದ್ದೆವು; ಆದರೆ ಬೇರೆ ಮಾರ್ಗದಿಂದ ಹೊರರಾಜ್ಯಕ್ಕೆ ಕಬ್ಬು ಹೋಗಿ ನಮ್ಮ ಲೆಕ್ಕದಲ್ಲಿ ಸ್ವಲ್ಪ ಅಚಾತುರ್ಯ ನಡೆದುಹೋಯಿತು. ಸುಮಾರು 1ಲಕ್ಷದ 4 ಸಾವಿರದ 524 ಟನ್ ಕಬ್ಬನ್ನು ಪರ್ಮಿಟ್‌ನ ಮೂಲಕ ಕಳಿಸಿಕೊಟ್ಟಿದ್ದೇವೆ.

ಅವರು ಇನ್ನೊಂದು ಬಹಳ ಮುಖ್ಯವಾಗಿ ಈ ರೀತಿ ಕಬ್ಬು ಹೊರಗೆ ಹೋಗಿದ್ದರಿಂದ ನಮ್ಮ ರಾಜ್ಯಕ್ಕೆ ಆದ ಹಾನಿ ಎಷ್ಟು ಎಂದು ಪ್ರಶ್ನೆ ಕೇಳಿದ್ದಾರೆ. ಅದು ಬಹಳ ಮಹತ್ವವಾದ ಅಂಶ. ಅದರ ಬಗ್ಗೆ ಲಕ್ಷ್ಯ ಕೊಡಬೇಕಾದುದು ಸರಿ. ನಾವು ಇದರ ಬಗ್ಗೆ ಸಂಪೂರ್ಣವಾದ ಮಾಹಿತಿಯನ್ನು ಕೇಳಿದ್ದೆವು. ಆದರೆ ಅದನ್ನು ಕೊಡಲು ಅವರಿಂದ ಸಾಧ್ಯವಾಗಲಿಲ್ಲ. ಈ ಹಿನ್ನೆಲೆಯಲ್ಲಿ ಪ್ರಶ್ನೆಯನ್ನು ಮುಂದಕ್ಕೆ ಹಾಕಬೇಕೆಂದು ನಿಜವಾಗಿಯೂ ಹೇಳಿದ್ದರೂ ಕೂಡ ನಾನು ಇದಕ್ಕೆ ಉತ್ತರವನ್ನು ಕೊಡಬೇಕು ಎನ್ನುವ ಉದ್ದೇಶದಿಂದ ಉತ್ತರವನ್ನು ಕೊಡುತ್ತಿದ್ದೇನೆ. ಹೊರರಾಜ್ಯಕ್ಕೆ ಕಬ್ಬು ಹೋಗಿರುವುದರಿಂದ ನಮ್ಮ ರಾಜ್ಯಕ್ಕೆ ಎಷ್ಟು ನಷ್ಟವಾಗಿದೆ ಎಂಬ ಬಗ್ಗೆ ಒಂದೆರಡು ದಿನದಲ್ಲಿ ಉತ್ತರವನ್ನು ಕೊಡುತ್ತೇನೆ.

ಶ್ರೀ ಶಿವಾನಂದ ಹೆಚ್.ಕೌಜಲಗಿ:- ಹಾಗಾದರೆ ಈ ಪ್ರಶ್ನೆಯನ್ನು ತಡೆಹಿಡಿಯಿರಿ.

ಅಧ್ಯಕ್ಷರು:- ಅವರು ನಿಮಗೆ ಮಾಹಿತಿಯನ್ನು ಕೊಡುತ್ತೇನೆಂದು ಹೇಳಿದ್ದಾರೆ.

ಶ್ರೀ ಶಿವಾನಂದ ಹೆಚ್.ಕೌಜಲಗಿ:- ನಾನೇನು ಅವರ ಮನೆಗೆ ಹೋಗಿ ಕೇಳಬೇಕೇ? ನಮಗೆ ಇಲ್ಲಿ ಕೇಳುವ ಹಕ್ಕು ಇದೆ; ಆದ್ದರಿಂದ ಅವರಿಂದ ಮಾಹಿತಿಯನ್ನು ಕೊಡಿಸಿ; ಅಥವಾ ಈ ಪ್ರಶ್ನೆಯನ್ನು ತಡೆಹಿಡಿಯಿರಿ. ನಮಗೆ ಗೊತ್ತಿರುವಂತೆ 15 ದಿನಗಳಲ್ಲಿ ಸುಮಾರು 10 ಲಕ್ಷ ಟನ್ ಕಬ್ಬು ಹೊರರಾಜ್ಯಕ್ಕೆ ಹೋಗಿದೆ. ಆದರೆ ಇವರು ಒಂದು ಲಕ್ಷ ಟನ್ ಎಂದು ಹೇಳುತ್ತಾರೆ . ಈ ರೀತಿ 10 ಲಕ್ಷ ಟನ್‌ಗಿಂತ ಹೆಚ್ಚು ಕಬ್ಬು ಹೊರ ರಾಜ್ಯಕ್ಕೆ ಹೇಗೆ ಹೋಯಿತು? ಇದು ಒಂದು ರೀತಿಯಲ್ಲಿ ಹಗಲುದರೋಡೆಯಂತೆ ಆಗಿದೆ. ಇದರಿಂದ ಸರ್ಕಾರಕ್ಕೆ ಸುಮಾರು 4 ಕೋಟಿಗಿಂತ ಹೆಚ್ಚು ನಷ್ಟವಾಗಿದೆ. ಆ ನಾಲ್ಕು ಕೋಟಿ ಹಣವನ್ನು ಕೊಡುವವರು ಯಾರು?

ಡಾ|| ಹೆಚ್.ಡಿ.ಲಮಾಣಿ:- ತಾವು ಏನು 10 ಲಕ್ಷ ಟನ್ ಕಬ್ಬು ಹೋಗಿದೆ ಎಂದು ಹೇಳುತ್ತಿದ್ದೀರಿ ಅದು ಹೋಗಿರಲಿಕ್ಕೂ ಸಾಕು. ನಾನು ಅದನ್ನು ಅಲ್ಲಗಳೆಯುವುದಿಲ್ಲ. ನಾನು ಈ ಮೊದಲೇ ಹೇಳಿದಂತೆ ಬೇರೆ ದಾರಿಗಳಿಂದ ಆ ರೀತಿ ಕಬ್ಬು ಹೋಗಿರಬಹುದು. ಆದರೆ ನಾವು ಪರ್ಮಿಟ್ ಕೊಟ್ಟಿದ್ದು ಮಾತ್ರ ಒಂದು ಲಕ್ಷದ ನಾಲ್ಕು ಸಾವಿರ ಐನೂರ ಇಪ್ಪತ್ತನಾಲ್ಕು ಟನ್‌ಗಳಿಗೆ ಮಾತ್ರ. ಆದರೆ ಆದರಿಂದ 4 ಕೋಟಿ ರೂಪಾಯಿ ಲುಕ್ಸಾನಾಯಿತು ಎಂದು ತಾವೇನು ಹೇಳುತ್ತಿದ್ದೀರಿ ಅದರ ಬಗ್ಗೆ ಅಸೆಸ್ ಮಾಡಬೇಕಾಗುತ್ತದೆ. ಕ್ಯಾಲ್‌ಕ್ಯುಲೇಷನ್ ಮಾಡಬೇಕಾಗುತ್ತದೆ. ಈ ಅಧಿವೇಶನ ಮುಗಿಯುವುದರೊಳಗೆ ಆ ವಿವರಗಳನ್ನು ಕೊಡುತ್ತೇನೆ.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್:- ನಾನೂ ಆ ಸಭೆಯಲ್ಲಿದ್ದೆ. ಹೊರಗೆ ಕಳಿಸುವುದು ಅನಿವಾರ್ಯವಾಯಿತು. ಆಮೇಲೆ ಜಿಲ್ಲಾಧಿಕಾರಿಗಳು ಏನು ಹೇಳಿದರೆಂದರೆ ಪ್ರತಿ ಟನ್ನಿಗೆ 20 ರೂಪಾಯಿ ಫ್ಲಾಟ್ ರೇಟ್ ಮಾಡೋಣ, ಆ ಕಾರ್ಖಾನೆಗಳಿಗೆ ಒಂದು ಆದೇಶ ಕೊಡೋಣ. ಅವರು ಮುರಿದುಕೊಳ್ಳಲಿ, ನಂತರ ಆ ಹಣವನ್ನು ಸರಕಾರಕ್ಕೆ ಕಳುಹಿಸಿಕೊಡಬೇಕೆಂದು ತೀರ್ಮಾನವಾಯಿತು. ಆ ಕಾರ್ಖಾನೆಗಳವರು 4 ಕೋಟಿ ರೂಪಾಯಿ ನಷ್ಟ ನಮ್ಮ ಸರಕಾರದ ಟ್ಯಾಕ್ಸ್ ಅನ್ನು ಮುರಿದುಕೊಂಡಿದ್ದಾರೆ. ನಂತರ ಮಹಾರಾಷ್ಟ್ರ ಸರಕಾರದವರು ಆಡಿಟ್ ಅಬ್ಜೆಕ್ಷನ್ ಮಾಡಿದರು. ಏನೆಂದರೆ ಕರ್ನಾಟಕ ಸರಕಾರದ 4ಕೋಟಿ ಹಣವನ್ನು ಸುಮ್ಮನೆ ಬಳಸಿಕೊಳ್ಳುತ್ತಿದ್ದೀರಿ, ಕರ್ನಾಟಕ ಸರಕಾರಕ್ಕೆ ನೀವು ವಾಪಸ್ ಕೊಟ್ಟಿಲ್ಲ. ಇದನ್ನು ಕೂಡಲೇ ವಾಪಸ್ ಕೊಡಬೇಕೆಂದು ತಿಳಿಸಿದರು. ಈ ಹಿಂದೆ ನಾನು ಶೂನ್ಯ ವೇಳೆಯಲ್ಲಿ ನಾನು ನಮ್ಮ ಹಣವನ್ನು ತರಿಸಿಕೊಳ್ಳಿ, ಸುಮ್ಮನೆ ಅಲ್ಲಿ ಬಿಟ್ಟಿದ್ದೀರಿ ಹದ್ದು ಬಡಿದು ಹಾವಿಗೆ ಹಾಕಿದ್ದೀರಿ ಎಂದು ಹೇಳಿದ್ದೆ. ನಮ್ಮ ರೈತರವನ್ನು ಬಿಡಲಿಲ್ಲ. ಅಲ್ಲಿ 20 ರೂಪಾಯಿಗಳಂತೆ ಮುರಿದುಕೊಂಡಿರಿ. ಮಹಾರಾಷ್ಟ್ರ ಸರಕಾರಕ್ಕೆ ಇವರು ದುಡ್ಡು ಕೊಟ್ಟರು . ಕ್ರಮ ತೆಗೆದುಕೊಂಡಿದ್ದೀರಿ ಎಂಬುದನ್ನು ಹೇಳಿ?

ಡಾ|| ಹೆಚ್.ಡಿ.ಲಮಾಣಿ:- ಇದು ಈ ಪ್ರಶ್ನೆಗೆ ಸಂಬಂಧಪಟ್ಟಿದ್ದಲ್ಲ. ಆದರೂ ಕೂಡ ಇದರ ಬಗ್ಗೆ ನಾನು ಮಾಹಿತಿಯನ್ನು ತರಿಸಿ ಒಂದು ವೇಳೆ ಮಹಾರಾಷ್ಟ್ರ ಸರಕಾರದಲ್ಲಿ ಆ ಹಣ ಇದ್ದರೆ...

(ಗೊಂದಲ)

ಡಾ|| ಹೆಚ್.ಡಿ.ಲಮಾಣಿ: ಹಣ ಇದ್ದರೆ ಅದನ್ನು ಖಂಡಿತವಾಗಿ ತರಿಸಿಕೊಳ್ಳಲಿಕ್ಕೆ ಪ್ರಯತ್ನ ಮಾಡುತ್ತೇನೆ. ಅದರಲ್ಲಿ ಸಂಶಯ ಬೇಡ.

(ಗೊಂದಲ)

ಶ್ರೀ ಶಿವಾನಂದ ಹೆಚ್.ಕೌಜಲಗಿ:- ಮಹಾರಾಷ್ಟ್ರ ಸರಕಾರದವರು ಆಡಿಟ್‌ನಲ್ಲಿ ಆ ಹಣವನ್ನು ಕರ್ನಾಟಕ ಸರಕಾರಕ್ಕೆ ಕೊಡಬೇಕಾಗಿದೆಯೆಂದು ಹೇಳಿದ್ದಾರೆ. ಆ ನಂತರ 92-93ರಲ್ಲಿ ಪರ್ಚೇಸ್ ಟ್ಯಾಕ್ಸ್ ಬಾಬ್ತು ಸುಮಾರು ಮೂರೂವರೆ ಕೋಟಿ ನಮಗೆ ಬರಬೇಕಾಗಿದೆ. ಹೀಗೆ ಒಟ್ಟು 8ಕೋಟಿ ಹೊರಗೆ ಬಿಟ್ಟಿದ್ದೀರಿ; ರೈತರ ರೊಕ್ಕ ಮುರಿದುಕೊಂಡಿದ್ದೀರಿ.

ವಿಷಯ:- ಖಾದಿ ಗ್ರಾಮೋದ್ಯೋಗ ಸಂಘಗಳನ್ನು ಕುರಿತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 73(192)

ಶ್ರೀ ಡಿ.ಆರ್.ಪಾಟೀಲ್(ಗದಗ್)